ಓ.ಎಸ್. ನಂಃ **79/2022**
<u>**ಪಿಡಬ್ಲ್ಯೂಃ 1**</u>

ದಿನಾಂಕಃ 10-07-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಎಸ್ ಕೆ ವಕೀಲರಿಂದಃ**</u>

ನಾನು 10 ನೇ ತರಗತಿ ವರೆಗೆ ಓದಿದ್ದೇನೆ. ನಾನು ಯಾದಗಿರಿಯಲ್ಲಿ ವಾಸವಾಗಿದ್ದು, ಆಗಾಗ ರಾಮಸಮುದ್ರ ಗ್ರಾಮಕ್ಕೆ ಹೋಗಿ ಬರುತ್ತೇನೆ. ನಾನು ಚಿಕ್ಕಂದಿನಿಂದಲೂ ಯಾದಗಿರಿಯಲ್ಲಿ ವಾಸವಾಗಿದ್ದೇನೆ. ರಾಮಸಮುದ್ರ ಗ್ರಾಮದಲ್ಲಿ ನಾನು ಮನೆ ಹೊಂದಿದ್ದೇನೆ. ಸದರಿ ಮನೆಯಲ್ಲಿ ನನ್ನ ಕೆಲಸಗಾರರು ವಾಸವಾಗಿದ್ದಾರೆ. ನಾನು ರಾಮಸಮುದ್ರ ಗ್ರಾಮದಲ್ಲಿ ಸುಮಾರು 30 ಎಕರೆ ಜಮೀನು ಹೊಂದಿದ್ದು, ಒಕ್ಕಲುತನ ಮಾಡುತ್ತೇನೆ. ಪ್ರತೀ ರವಿವಾರ ರಾಮಸಮುದ್ರ ಗ್ರಾಮಕ್ಕೆ ಹೋಗಿ ಬರುತ್ತೇನೆ. ಹೋದಾಗ ನನ್ನ ಹೊಲಗಳನ್ನು ತಿರುಗಾಡಿ ನೋಡಿಕೊಂಡು ಬರುತ್ತೇನೆ.

2. ದಾವಾ ಜಮೀನಿನ ಸರ್ವೆ ನಂ.149 ಇರುತ್ತದೆ. ಸರ್ವೆ ನಂ.149 ರಲ್ಲಿ ಒಟ್ಟು ಎಷ್ಟು ಹಿಸ್ಸಾಗಳು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.149 ರಲ್ಲಿ ಒಟ್ಟು 4-5 ಎಕರೆ ಜಮೀನು ಇರಬಹುದು, ನನಗೆ ಸೇರಿದ 18 ಗುಂಟೆ ಮಾತ್ರ ಇರುತ್ತದೆ. ನನಗೆ ಸೇರಿದ 18 ಗುಂಟೆ ಹೊರತು ಪಡಿಸಿ 02 ಎಕರೆ ಚಿಲ್ಲರೆ ಗುಂಟೆ ಜಮೀನು ಸರಕಾರಕ್ಕೆ ಸೇರಿರುತ್ತದೆ. ಇನ್ನುಳಿದ ಜಮೀನು ಯಾರಿಗೆ ಸೇರಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ.149 ರ ಉತ್ತರ ಭಾಗದಲ್ಲಿ ನನ್ನ 18 ಗುಂಟೆ ಜಮೀನು ಇರುತ್ತದೆ. ಅದಕ್ಕೆ ಹೊಂದಿಕೊಂಡು ಸರ್ವೆ ನಂ.148 ರಲ್ಲಿನ ನನ್ನ ಜಮೀನು ಇರುತ್ತದೆ.

3. ನನ್ನ 18 ಗುಂಟೆ ಜಮೀನಿನ ಪೂರ್ವಕ್ಕೆ ಸರ್ವೆ ನಂ.153 ರ ಜಮೀನು, ಪಶ್ಚಿಮಕ್ಕೆ ಬಂಡಿ ದಾರಿ, ಉತ್ತರಕ್ಕೆ ಬಂಡಿ ದಾರಿ ಹಾಗೂ ದಕ್ಷಿಣಕ್ಕೆ ಒಂದು ಡ್ರೇನ್ (ಮೋರಿ) ಇರುತ್ತದೆ. ಸರ್ವೆ ನಂ.149 ರಲ್ಲಿನ ಸಂಪೂರ್ಣ ಜಮೀನಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ.153 ರ ಜಮೀನು ಯಾರಿಗೆ ಸೇರಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಮಳೆ ನೀರು ಹೋಗಲು ಮೋರಿ ಇದ್ದು ಅದನ್ನು ಕಟ್ಟಡ ಮಾಡಿರುವುದಿಲ್ಲ. ಸರ್ವೆ

ನಂ.153 ರ ಜಮೀನು ಗ್ರಾಮಕ್ಕೆ ಹೊಂದಿಕೊಂಡಿದ್ದು ಅದರಲ್ಲಿ ಸಾಕಷ್ಟು ಮನೆ ನಿರ್ಮಾಣ ಆಗಿದ್ದಾವೆ ಎಂದರೆ ಸಾಕ್ಷಿಯು ಮನೆ ನಿರ್ಮಾಣ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ಸರ್ವೆ ನಂ.149 ರ ಜಮೀನು ಸಾಗುವಳಿ ಭೂಮಿ ಆಗಿರುತ್ತದೆ. ಅದರಲ್ಲಿ ಬೆಳೆ ಮಾಡುತ್ತೀರಾ ಎಂದರೆ ಸಾಕ್ಷಿಯು ಮಾಡುತ್ತಿದ್ದೆವು ಆದರೆ ಈಗ ಪ್ರತಿವಾದಿಯರು ನಮಗೆ ಗೊತ್ತಿಲ್ಲದೇ ಗುಡಿಸಲು ಹಾಗೂ ಮನೆ ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆ ದಾಖಲಿಸುವ ಸಮಯದಲ್ಲಿ ದಾವಾ ಜಮೀನು ಸಾಗುವಳಿ ಜಮಿನು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆ ದಾಖಲಿಸುವ 2-3 ವರುಷಗಳ ಹಿಂದೆ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಮನೆ ಹಾಗುಾ ಗುಡಿಸಲು ಕಟ್ಟಿಕೊಂಡಿದ್ದಾರೆ. ಪ್ರತಿವಾದಿಯರು ಸುಮಾರು 8-9 ಗುಂಟೆಯಲ್ಲಿ ಮನೆ ಹಾಗೂ ಗುಡಿಸಲು ಹಾಕಿಕೊಂಡಿದ್ದು, ಉಳಿದ ಸುಮಾರು 10 ಗುಂಟೆ ಜಮೀನನ್ನು ನಾವು ಸಾಗುವಳಿ ಮಾಡುತ್ತಿದ್ದೇವೆ.

5. ಈ ದಾವೆಯನ್ನು ದೊಡ್ಡ ಸಾಬಣ್ಣ, ಸಣ್ಣ ಸಾಬಣ್ಣ, ಮಲ್ಲಪ್ಪ, ಬಂಗಾರಪ್ಪ ಹಾಗೂ ಇತರರ ವಿರುದ್ಧ ದಾಖಲು ಮಾಡಿದ್ದೇನೆ. ಪ್ರತಿವಾದಿಯರ ಪೈಕಿ ಕೆಲವರು ಮನೆ ಹಾಗೂ ಇನ್ನು ಕೆಲವರು ಗುಡಿಸಲು ಹಾಕಿಕೊಂಡಿದ್ದಾರೆ ಆದರೆ ನಿಖರವಾಗಿ ಯಾರು ಮನೆ ಕಟ್ಟಿಕೊಂಡಿದ್ದಾರೆ ಹಾಗೂ ಯಾರು ಗುಡಿಸಲು ಹಾಕಿದ್ದಾರೆ ಎಂಬುದು ನನಗೆ ಹೇಳಲು ಬರುವುದಿಲ್ಲ. ಸದರಿ ಮನೆ ಹಾಗೂ ಗುಡಿಸಲುಗಳ ವಿಸ್ತೀರ್ಣ ನನಗೆ ಗೊತ್ತಿಲ್ಲ. 18 ಗುಂಟೆ ಜಮೀನಿನ ದಕ್ಷಿಣ ಭಾಗದಲ್ಲಿ ಪ್ರತಿವಾದಿಯರು ಮನೆ ಹಾಗೂ ಗುಡಿಸಲು ಕಟ್ಟಿಕೊಂಡಿದ್ದಾರೆ. ಪ್ರತಿವಾದಿಯರು 08 ಗುಂಟೆಯಲ್ಲಿ ಮಾತ್ರ ಸ್ವಾದೀನದಲ್ಲಿ ಇದ್ದರು ಸಂಪೂರ್ಣ 18 ಗುಂಟೆಗೆ ಸಂಬಂಧಿಸಿದಂತೆ ಯಾಕೆ ದಾವೆ ದಾಖಲಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಸೇರಿದ ಸಂಪೂರ್ಣ ಜಮೀನಿಗೆ ದಾವೆ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ.

6. ಪ್ರತಿವಾದಿಯರು ಮನೆ ಹಾಗೂ ಗುಡಿಸಲು ಹಾಕಿಕೊಳ್ಳುವ ಸಮಯದಲ್ಲಿ ನಿಮಗೆ ಮಾಹಿತಿ ಇತ್ತು ಎಂದರೆ ಸಾಕ್ಷಿಯು ಸರಿ, ನಾವು ತಕರಾರು ಮಾಡಿದರೂ ಸಹ ಅವರು ಕೇಳಿಲ್ಲ ಎಂದು ನುಡಿಯುತ್ತಾರೆ. ಆ ನಂತರ ಎರಡು ವರುಷಗಳ ಬಳಿಕ ನಾನು ಈ ದಾವೆ ದಾಖಲು ಮಾಡಿದ್ದೇನೆ. ಎರಡು ವರುಷಗಳ ವರೆಗೆ ಯಾಕೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿಯು ಪಂಚಾಯಿತಿ ರವರಿಂದ ಹೇಳಿಸಿ ನೋಡಿದ್ದೆನು ಆದರೆ ಪ್ರತಿವಾದಿಯುರು ಪ್ರತಿಕ್ರಿಯೇ ನೀಡದ ಕಾರಣ ದಾವೆ ದಾಖಲು ಮಾಡಿದ್ದೇನೆ. ಪಂಚಾಯಿತಿಗೆ ಲಿಖಿತ ಅರ್ಜಿ ಸಲ್ಲಿಸಿದ್ದೆನು, ಆದರೆ ಅದರ ಪ್ರತಿಯನ್ನು ಹಾಜರು ಮಾಡಿಲ್ಲ.

7. ನನ್ನ ತಾಯಿ ಸರ್ವೆ ನಂ.149ರ ಮೂಲ ಮಾಲಿಕರು ಆಗಿದ್ದರು. ನನ್ನ ತಾಯಿಗೆ ಸದರಿ ಜಮೀನು ಅವರ ತಂದೆಯ ಕಡೆಯಿಂದ ಬಂದಿತ್ತು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಹಾಜರು ಮಾಡಿಲ್ಲ. ವಾದ ಪತ್ರದಲ್ಲಿಯೂ ಸಹ ಸದರಿ ಅಂಶವನ್ನು ಬರೆಸಿಲ್ಲ. ನನ್ನ ತಾಯಿ ಈರಮ್ಮ ರವರ ತಂದೆಯ ಹೆಸರು ಭದ್ರಪ್ಪ ಎಂದು ಇರುತ್ತದೆ. ಸದರಿ ಭದ್ರಪ್ಪ ರವರಿಗೆ ನನ್ನ ತಾಯಿ ಈರಮ್ಮ ಮತ್ತು ಅವರ ಸಹೋದರ ಬಸವರಾಜಪ್ಪ ಇಬ್ಬರು ಮಾತ್ರ ಮಕ್ಕಳಾಗಿರುತ್ತಾರೆ. ನನ್ನ ತಾಯಿಗೆ ನಾವು ಒಟ್ಟು 04 ಜನ ಮಕ್ಕಳು ಇದ್ದೇವೆ. ಪ್ರಭಾಕರ, ಚನ್ನಬಸಪ್ಪ ಹಾಗೂ ಇಂದಿರಾ ರವರು ನನ್ನ ಸಹೋದರ-ಸಹೋದರಿಯಾರಾಗಿರುತ್ತಾರೆ. ಸದರಿ ನನ್ನ ಸಹೋದರ-ಸಹೋದರು ಈಗ ಜೀವಂತ ಇದ್ದಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ